## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ. ನಂ. 73/2016** **ಫ್ರಾ.ಸಾ – 8**

**ಚಾ.ಸಾ – 14**

**ದಿನಾಂಕಃ 17.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಧರ್ ಬಿ ಎಸ್ |
| ತಂದೆಯ ಹೆಸರು | : | ಸೋಮಯ್ಯ |
| ವಯಸ್ಸು | : | 44 ವರ್ಷ |
| ಉದ್ಯೋಗ | : | CPI, Halaguru Circle. |
| ವಾಸ ಸ್ಥಳ | : | ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು ದಿ. 19.01.2015 ರಿಂದ 28.12.2016 ರ ತನಕ ಶ್ರೀಮಂಗಲ ಪೊ.ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 01.08.2015 ರಂದು ಪ್ರಕರಣದ ಕಡತವನ್ನು ಚಾಸಾ 13 ರವರಿಂದ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ದಿ. 21.08.2015 ರಂದು 2ನೇ ಆರೋಪಿಯು ನೀರಿಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಸದರಿ 2ನೇ ಆರೋಪಿಯನ್ನು ಬಂದಿಸಿ ಜಮೀನಿನ ಮೇಲೆ ಬಿಡಗುಡೆಗೊಳಿಸಿರುತ್ತೇನೆ ಹಾಗೂ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ.

ದಿ. 22.08.2015 ರಂದು 2ನೇ ಆರೋಪಿಯು ಹೇಳಿದಂತೆ ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಚಾಸಾ 9 ಮತ್ತು 10 ರವರಿಗೆ ನೋಟಿಸ್ ಜಾರಿ ಮಾಡಿ ಅವರ ಸಮಕ್ಷಮ 2 ನೇ ಆರೋಪಿ ತೋರಿಸಿದ ಸ್ಥಳದ ಮಹಜರ್ ಕ್ರಮವನ್ನು ಬೆ. 11.15 ರಿಂದ 12.30 ರ ತನಕ ಜರುಗಿಸಿರುತ್ತೇನೆ ಹಾಗೂ 2ನೇ ಆರೋಪಿ ಸ್ಥಳದಲ್ಲಿ ತನ್ನ ಜಮೀನಿನ ಆರ್ ಟಿ ಸಿ ನೀಡಿದ್ದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ.

ದಿ. 21.09.2015 ರಂದು 1, 3 ನೇ ಆರೋಪಿ ಹಾಗೂ ಸಯ್ಯುದ್ ವಾಸಿನ್ ರವರನ್ನು ಮೈಸೂರಿನಲ್ಲಿ ವಶಕ್ಕೆ ಪಡೆದು ಠಾಣೆಗೆ ಹಾಜರಾಗಿ ಅದರಲ್ಲಿ 1 ನೇ ಆರೋಪಿ ವಿಚಾರಣೆ ಮಾಡಿದ್ದು ತಾನು ಕೃತ್ಯದ ಸಮಯದಲ್ಲಿ ವಾಹನವನ್ನು ಕಳುಹಿಸಿಕೊಟ್ಟ ಬಗ್ಗೆ ಒಪ್ಪಿಕೊಂಡ ಮೇರೆಗೆ ಆತನನ್ನು ಬಂದಿಸಿ ಬಂದನನಿಯಮಗಳನ್ನು ಪಾಲಿಸಿ ಆತನ ಸ್ವ ಇಚ್ಛಾ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. 3 ನೇ ಆರೋಪಿ ಈಗಾಗಲೇ ಬಂದನಕ್ಕೊಳಗಾಗಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು 3ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ ಹಾಗೂ ಸಯ್ಯುದ್ ವಾಸಿನ್ಅವರ ಸ್ವ ಇಚ್ಛಾ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಸಯ್ಯುದ್ ವಾಸಿನ್ ರವರ ಪಾತ್ರ ಪ್ರಕರಣದಲ್ಲಿ ಕಂಡು ಬಂದಿಲ್ಲವಾದ್ದರಿಂದ ಕಲಂ 169 ರಂತೆ ಬಾಂಡ್ ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ನಂತರ 3ನೇ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ್ದ ವಸ್ತುಗಳನ್ನು ತನ್ನೊಟ್ಟಿಗೆ ಬಂದರೆ ತೆಗೆದು ಹಾಜರುಪಡಿಸುವುದಾಗಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ತಿಳಿಸಿದ್ದು ಅದರಂತೆ 3ನೇ ಆರೋಪಿ ಹೇಳಿದಂತೆ ಕೃತ್ಯದ ಸ್ಥಳಕ್ಕೆ ತೆರಳಿ ಪಂಚರಾದ ಚಾಸಾ 9 ಮತ್ತು10 ರವರನ್ನು ಬರಮಾಡಿಕೊಂಡು ಅವರ ವಿಚಾರ ತಿಳಿಸಿ ಅವರಿಗೆ ನೋಟೀಸ್ ಜಾರಿ ಮಾಡಿ ಅವರ ಒಪ್ಪಿಕೊಂಡಿರುತ್ತಾರೆ. ನಂತರ 3ನೇ ಆರೋಪಿ ಇವರು 2ನೇ ಆರೋಪಿ ತೋಟಕ್ಕೆ ತೆರಳಿ ಅಲ್ಲಿ ಒಂದು ಕಾಫಿ ಗಿಡದ ಬಳಿ ಕೃತ್ಯಕ್ಕೆ ಉಪಯೋಗಿಸಿದ್ದ

ವಸ್ತುಗಳನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಸುತ್ತಿ ಇಟ್ಟಿದ್ದ ವಸ್ತುಗಳನ್ನು ತೆಗೆದು ಹಾಜರುಪಡಿಸಿದ್ದು ಸದರಿ ವಸ್ತುಗಳನ್ನು ಪರಿಶೀಲಿಸಲಾಗಿ ನೀಲಿ ಮತ್ತು ಕಪ್ಪು ಬಣ್ಣದಿಂದ ಕೂಡಿದ Power axe professional tools, ಮರದ cutting machine ಹಾಗೂ ಹಿಡಿ ಇಲ್ಲದ ಕೊಡಲಿ ಹಾಗೂ ಕಬ್ಬಿಣದ ಹಾರೆಯನ್ನು ಮತ್ತು ಅಡಗಿಸಿಡಲು ಇಟ್ಟಿದ್ದ ಪ್ಲಾಸ್ಟಿಕ್ ಕವರ್ ಅನ್ನು ಹಾಜರುಪಡಿಸಿದ್ದು ಮಹಜರ್ ಮಾಡಿ ಮಹಜರ್ ಮೂಲಕ 12.30 ರಿಂದ 1.30 ರತನಕ ಮಾಡಿ ಅಮಾನತುಪಡಿಸಿಕೊಂಡಿರುತ್ತೇವೆ. ನಂತರ ಠಾಣೆಗೆ ಹಾಜರಾಗಿ ವಸ್ತುಗಳನ್ನು ಮಾಲು ಪಟ್ಟಿಯಲಿ ಆಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. 1ನೇ ಆರೋಪಿಯನ್ನು ಬಂದಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿ. 13.10.2015 ರಂದು ಸಾಕ್ಷಿದಾರರಾದ ಚಾಸಾ 2 ರಿಂದ 6 ಹಾಗೂ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ವಿರಾಜಪೇಟೆಯ ವಲಯ ಅರಣ್ಯಾಧಿಕಾರಿಗಳು ಅಮಾನತುಪಡಿಸಿಕೊಂಡಿದ್ದ ಬೀಟೆ ಮರದ ಮೌಲ್ಯದ ದೃಡೀಕರಣ ಪತ್ರವನ್ನು ಕವಚ ಪತ್ರದೊಂದಿಗೆ ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ.

ದಿ. 15.10.2015 ರಂದು ಚಾಸಾ 9, 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ವಲಯ ಅರಣ್ಯಾದಿಕಾರಿಗಳು ಪೊನ್ನಂಪೇಟೆ ಅವರಿಗೆ ಅಮಾನತುಪಡಿಸಿಕೊಂಡಿದ್ದ ಬೀಟೆ ಮರದ ತುಂಡುಗಳನ್ನು ಹಾಗೂ ಕೃತ್ಯದ ಸ್ಥಳದಲ್ಲಿ ಗುರುತಿಸಲಾಗಿದ್ದ ಬೀಟೆ ಮರದ ಬುಡಗಳನ್ನು ಪರಿಶೀಲಿಸಿ ಒಂದಕ್ಕೊಂದು ಹೋಲಿಕೆಯಾಗುತ್ತದೆ ಎಂಬ ವರದಿ ನೀಡುವಂತೆ ಮನವಿ ಮಾಡಿರುತ್ತೇನೆ.

ದಿ. 17.12.2015 ರಂದು ಪೊನ್ನಂಪೇಟೆಯ ವಲಯಅರಣ್ಯಾದಿಕಾರಿಗಳು ಪೊನ್ನಂಪೇಟೆ ಉಪ ವಲಯ ಅರಣ್ಯಾದಿಕಾರಿಗಳು ನೀಡಿದ ವರದಿಯನ್ನು ಕವಚ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿ. 31.12.2015 ರಂದು ಆರೋಪಿತರ ವಿರುದ್ಧ ಆರೋಪ ಸಾಬೀತಾದ ಕಾರಣ ಅಂತಿಮ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿ ಪಿ 9 ಮತ್ತು 10 ಮಹಜರ್ ಗಳಲ್ಲಿ ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 9(ಸಿ) ಮತ್ತು 10 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ವಲಯ ಅರಣ್ಯಾದಿಕಾರಿಗಳು ನೀಡಿದ ವರದಿಯನ್ನು ನಿ ಪಿ 12 ನೋಡಿ ಗುರುತಿಸಿದ್ದು ಸಹಿಯನ್ನು ನಿ ಪಿ 12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು 4 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 15 ರಿಂದ 18 ಎಂದು ಗುರುತಿಸಲಾಯಿತು. ನಿ ಪಿ 15 ರಿಂದ 18 ಫೋಟೋಗಳಿಗೆ ಸಿ ಡಿ ಅಥವಾ negative ಇರುವುದಿಲ್ಲ, ಆದ್ದರಿಂದ ಅವುಗಳನ್ನು ನಿಶಾನೆಗೊಳಿಸಲು ತಕರಾರು ಮಾಡಿದ್ದು ಆ ತಕರಾರಿಗೆ ಒಳಗೊಂಡಂತೆ ನಿಶಾನೆಗೊಳಿಸಲಾಗಿದೆ.

ಸಾಕ್ಷಿಯು ಅಮಾನತು ಸಮಯದಲ್ಲಿ ವಶಪಡಿಸಿಕೊಂಡಿದ್ದ ಮರ ಕಡಿಯುವ ಯಂತ್ರ, ಕೊಡಲಿ ಹಾಗೂ ಹಾರೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ 1 ರಿಂದ 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1, 2 ಮತ್ತು 4 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ 2 ಮತ್ತು 4 ಆರೋಪಿತರ ಪರ ಶ್ರೀಮತಿ ಸಿ. ಬಿ. ಎ. ವಕೀಲರಿಂದಃ</u>**

ಮರದ ಚೆಕ್ಕೆಗಳು ಸ್ಥಳದಲ್ಲಿ ಕಂಡು ಬಂತು, ಅವುಗಳನ್ನು ವಶಪಡಿಸಿಕೊಂಡಿಲ್ಲ. ಮರದ ಕೊಂಬೆಗಳನ್ನು ಅವಶ್ಯಕತೆ ಇಲ್ಲದಿರುವುದರಿಂದ ಅವುಗಳನ್ನು ವಶಪಡಿಸಿಕೊಂಡಿಲ್ಲ. ಎರಡು ಮರಗಳ ಕುತ್ತಿಗಳ ಅಂತರ 50 ಮೀ ದೂರ. ಮು ಮಾ 1 ರ ಮೇಲೆ ಯಾವುದೇ ಮಹಜರ್ ಚೀಟಿ ಇಲ್ಲ ಎಂದರೆ ಸರಿ, 10 ವರ್ಷಗಳಾದ್ದರಿಂದ ಹಾಳಾಗಿರಬಹುದು. ಮಹಜರ್ ನಲ್ಲಿ blade ಮೇಲೆ power axe ಮಾತ್ರ ಬರೆದಿದ್ದು 18 ಸಂಖ್ಯೆ ಇರುವುದನ್ನು ಬರೆದಿಲ್ಲ ಎಂದರೆ ಸರಿ.

ಮು ಮಾ 1 ರಿಂದ 3 ಅವುಗಳಿಗೆ ಗುರುತಿಸಲು ಯಾವುದೇ ಸಂಖ್ಯೆ ಕೊಡಲಿಲ್ಲ. ಅವುಗಳ ಮೇಲೆ ಸಹಿ ಉಳ್ಳ ಪಂಚರ ಚೀಟಿ ಇರುವುದಿಲ್ಲ, ತುಂಬಾ ವರ್ಷಗಳಾದ್ದರಿಂದ ಹಾಳಾಗಿದೆ. ಮು ಮಾ 2 ರ ಮೇಲೆ ಒಂದು ಚೀಟಿ ಇದ್ದು ಆ ಚೀಟಿಯ ಮೇಲೆ IPC 506 ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಮೊದಲಿಗೆ ತನಿಖೆ ಮಾಡಿದ ಅಧಿಕಾರಿ ಎಂದರೆ ಸರಿ. 1 ನೇ ಆರೋಪಿಯ ಹೇಳಿಕೆಯ ಮೇರೆಗೆ tempo traveler ವಾಹನದ ಮಾಲೀಕರಾದ ಸಯ್ಯದ್ ವಾಸೀಮ್ @ ವಾಸೀಮ್ ಅಕ್ರಮ್ ರವರ ವಿರುದ್ಧ ತಪ್ಪಾಗಿ ಆರೋಪಿಯನ್ನಾಗಿ ಮಾಡಿದ್ದರು ಎಂದರೆ ಸರಿ.

ಚಾಸಾ 1 ರವರು ದಾಖಲಿಸಿದ FIR ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಮೊದಲಿಗೆ ವಾಹನದ ಮಾಲೀಕರನ್ನು 6 ನೇ ಆರೋಪಿಯನ್ನಾಗಿ ತೋರಿಸಿದ್ದು ಅವರ ಪ್ರಭಾವಕ್ಕೆ ಒಳಗೊಂಡು ಯಾವುದೇ ತಪ್ಪು ಮಾಡಿದ ಈ ಆರೋಪಿಗಳ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಪಡೆದಿರುವ ಆರೋಪಿಗಳು ಮತ್ತು ಸಾಕ್ಷಿದಾರರು

ನೀಡಿರುವ ಸ್ವ ಇಚ್ಛಾ ಹೇಳಿಕೆಗಳು ದೋಷಪೂರಿತ ಎಂದರೆ ಸರಿಯಲ್ಲ. ನಾನು ಪಡೆದಿರುವ ಆರ್ ಟಿ ಸಿಗಳು ಮತ್ತು ಮರ ಕಡೆದಿದೆ ಎಂದು ಹೇಳುವ ಜಾಗಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಕಚೇರಿಯಲ್ಲಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಫೋಟೋಗಳು ಮತ್ತು ಮು ಮಾ ಗಳು ಈ ಪ್ರಕರಣಕ್ಕೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅವರ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ** 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಆಳವಡಿಸಲು ತಿಳಿಸಿದ್ದು ಆಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ